




# ಡಾಂಗಿ ದಾಖಲೆ

ಈತ ಚಂದ್ರ ಬಹಾದ್ದೂರ್ ಡಾಂಗಿ. ಜಗತ್ತಿನ ಅತ್ಯಂತ ಕುಬ್ಜ ವ್ಯಕ್ತಿ ಎಂದು ಹೆಸರಾದವ. ಈತ ಜನಿಸಿದ್ದು 1939ರ ನವೆಂಬರ್ 30 ರಂದು. ನೇಪಾಳ ಪ್ರಜೆಯಾದ ಈತ ರಾಜಧಾನಿ ಕಠ್ಮಂಡುವಿನಿಂದ 540 ಕಿಮೀ ದೂರದಲ್ಲಿನ ಸಾಲ್ಯನ್ ಜಿಲ್ಲೆಯ ರೀಮ್ಖೋಲಿ ಎಂಬ ಹಳ್ಳಿಯಲ್ಲಿ ವಾಸವಾಗಿದ್ದಾನೆ. ಸುಮಾರು 200 ಮನೆಗಳುಳ್ಳ, ವಿದ್ಯುತ್ ಸಂಪರ್ಕವೂ ಇರದ ಸಣ್ಣ ಹಳ್ಳಿಯಲ್ಲಿ ಬಡ ದಂಪತಿಯ ಎಂಟು ಮಕ್ಕಳಲ್ಲಿ ಏಳನೆಯವನಾಗಿ ಜನಿಸಿದನು. ಈತನ ಎತ್ತರ 54.6 ಸೆಂಟಿ ಮೀಟರ್; ತೂಕ ಬರೀ 15 ಕೆಜಿ. ಇವನನ್ನು 2012 ರಲ್ಲಿ ವಿಶ್ವದ ಅತಿ ಚಿಕ್ಕ ಮಾನವ ಎಂದು ಗಿನ್ನೆಸ್ ದಾಖಲೆಗೆ ಸೇರಿಸಲಾಯಿತು. ಇವನ ಕುಟುಂಬದ ಇತರ ಸದಸ್ಯರೂ ಕಡಿಮೆ ಎತ್ತರದವರೇ ಆಗಿರುವುದು ವಿಶೇಷ.

ಒಮ್ಮೆ ಹಳ್ಳಿಯಲ್ಲಿ ಮರದ ಗುತ್ತಿಗೆದಾರನೊಬ್ಬ ಚಂದ್ರ ಡಾಂಗಿ ಹಾಗೂ ಅವನ ಸಹೋದರರನ್ನು ನೋಡಿ ಮಾಧ್ಯಮಗಳಿಗೆ ವಿಷಯವನ್ನು ತಿಳಿಸಿದ. ನಂತರ ಅವನ ವೈದ್ಯಕೀಯ ಪರೀಕ್ಷೆ ನಡೆಸಿ ಎತ್ತರವನ್ನು ಅಳತೆ ಮಾಡಿದಾಗ ಚಂದ್ರ ಡಾಂಗಿ ವಿಶ್ವದ ಅತಿ ಕಡಿಮೆ ಎತ್ತರದ ವಯಸ್ಕ ವ್ಯಕ್ತಿ ಎಂಬುದು ಸಾಬೀತಾಯಿತು.

ತನ್ನ ಸಹೋದರರೊಡನೆ ವಿಶ್ವದ ಎಲ್ಲಾ ಭಾಗಗಳಿಗೆ ತೆರಳಿ ಕಾರ್ಯಕ್ರಮಗಳಲ್ಲಿ ಭಾಗವಹಿಸುವ ಚಂದ್ರ ಡಾಂಗಿ, ತನ್ನೊಂದಿಗೆ ತನ್ನ ಗ್ರಾಮ ಹಾಗೂ ದೇಶದ ಹೆಸರನ್ನೂ ಪ್ರಖ್ಯಾತಿಗೆ ತರುತ್ತೇನೆಂದು ಹೆಮ್ಮೆಯಿಂದ ನುಡಿಯುತ್ತಾನೆ. ಮೊದಲ ಬಾರಿಗೆ ತನ್ನ ಹಳ್ಳಿಯನ್ನು ದಾಟಿ ರಾಜಧಾನಿ ಕಠ್ಮಂಡುವಿಗೆ ಬಂದಿದ್ದು ಗಿನ್ನೆಸ್ ದಾಖಲೆಗಾಗಿ ಅಳತೆ ಮಾಡಿಸಿಕೊಳ್ಳಲೆಂದೇ.

ಗಿನ್ನೆಸ್ ನ 57 ವರ್ಷದ ದಾಖಲೆಯನ್ನು ಅಳಿಸಿ ಹಾಕಿ ಹೊಸ ದಾಖಲೆ ಬರೆದ ಚಂದ್ರ ಡಾಂಗಿ. ತಾನು ಹದಿನಾರು ವರ್ಷದವನಿದ್ದಾಗಲೇ ತನ್ನ ತಾಯಿಯನ್ನು ಕಳೆದುಕೊಂಡನಂತೆ. ತನಗೆ ಬುದ್ಧಿ ಬಂದಾಗಿನಿಂದಲೂ ತನ್ನ ಹಿರಿಯ ಸಹೋದರರ ಆರೈಕೆಯಲ್ಲಿಯೇ ಬೆಳೆದಿದ್ದಾನೆ ಈ ಕುಳ್ಳ.

■ ಪ.ನಾ.ಹಳ್ಳಿ ಹರೀಶ್ ಕುಮಾರ್